**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 29/9/20

**ಸ್ಪೀಕರ್ ಕಾಗೇರಿ ಹೇಳಿಕೆ ಸಾರ್ವಜನಿಕರಿಂದಲೂ ಅಭಿಪ್ರಾಯ ಸಂಗ್ರಹ**

# ನಿಯಮಾವಳಿ ಪರಿಶೀಲನಾ ಸಮಿತಿ ರಚನೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳನ್ನು ಪರಿಶೀಲಿಸುವುದಕ್ಕಾಗಿ ಶೀಘ್ರವೇ ಸಮಿತಿ ರಚಿಸಲಾಗುವುದು ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

» **ಅಧಿವೇಶನದಲ್ಲಿ 40 ಗಂಟೆಗಳ ಕಾರ್ಯ ಕಲಾಪ**

ನಿಯಮಾವಳಿ ಸಮಿತಿ ರಚಿಸಲು ವಿಧಾನಸಭಾ ಅಧ್ಯಕ್ಷರಿಗೆ ಸದನ ಅಧಿಕಾರ ನೀಡಿದೆ. ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರ ನೇಮಕ ಹಾಗೂ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ನು ಪರಿಶೀಲಿಸಿ ತಿದ್ದುಪಡಿಗಳಿಗೆ ಶಿಫಾರಸು ಮಾಡುವುದು ಸಮಿತಿ ಮುಖ್ಯ ಉದ್ದೇಶವಾಗಿದೆ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಕಾರ್ಯಶೈಲಿ ಹಾಗೂ ನಡವಳಿಕೆಯ ಹಲವು ನಿಯಮಗಳು ಬಗ್ಗೆ ಸದನದ ಒಳಗೆ-ಹೊರಗೆ ಅನೇಕ ಬಾರಿ ಚರ್ಚೆಗಳಾಗಿವೆ. ಈ ಹಿನ್ನೆಲೆಯಲ್ಲಿ ಪರಿಶೀಲನೆ ವೇಳೆ ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ತಿಳಿಸಿದರು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪರಿಶೀಲನಾ ಸಮಿತಿ ರಚಿಸಲಾಗುವುದು. ಸಮಿತಿ ಸ್ವರೂಪ, ಕಾರ್ಯಯೋಜನೆಯನ್ನು ಆದಷ್ಟು ಬೇಗ ಅಂತಿಮಗೊಳಿಸಿ, ಅಧಿಕೃತ ವಿವರ ಇಷ್ಟರಲ್ಲೇ ನೀಡುವೆ ಎಂದು ಕಾಗೇರಿ ಹೇಳಿದರು.



## 6 ಸಚಿವರು, 28 ಶಾಸಕರು ಗೈರು

**ಈ ಬಾರಿಯ ವಿಧಾನಸಭೆ ಅಧಿವೇಶನಕ್ಕೆ 6 ಸಚಿವರು ಹಾಗೂ 28 ಶಾಸಕರು ಗೈರುಹಾಜರಾಗಿದ್ದರು. ಸಚಿವರು ಮತ್ತು 14 ಶಾಸಕರ ಗೈರುಹಾಜರಿಗೆ ಕರೊನಾ ಸೋಂಕು ಕಾರಣವಾಗಿದೆ. ಇಬ್ಬರಿಗೆ ಅನಾರೋಗ್ಯ, ಇನ್ನಿಬ್ಬರು ಶಾಸಕರ ಕುಟುಂಬ ಸದಸ್ಯರಿಗೆ ಸೋಂಕಿನ ಕಾರಣದಿಂದ ಗೈರು ಹಾಜರಾಗಿದ್ದಾರೆ. ಗೈರುಹಾಜರಿಗೆ ಅನುಮತಿ ಪಡೆದಿರುವ ಉಳಿದ 9 ಶಾಸಕರು ಮಾಹಿತಿ ನೀಡಿಲ್ಲವೆಂದು ಸ್ಪೀಕರ್ ಕಾಗೇರಿ ಹೇಳಿದರು.**

**ಅಧಿವೇಶನ ಫಲಪ್ರದ:** ಕರೊನಾ ಆತಂಕದ ನಡುವೆಯೂ 15ನೇ ವಿಧಾನಸಭೆಯ 7ನೇ ಅಧಿವೇಶನ ಎಲ್ಲರ ಸಹಕಾರದಿಂದ ಫಲಪ್ರದವಾಗಿದೆ. ಕಲಾಪ ಸಲಹಾ ಸಮಿತಿ ಸಭೆ ಒಮ್ಮತದ ತೀರ್ಮಾನದಂತೆ 8 ದಿನಗಳಿಂದ 6 ದಿನಗಳಿಗೆ ಅಧಿವೇಶನದ ಅವಧಿ ಇಳಿಸಲಾಯಿತು. ಒಟ್ಟು 40 ಗಂಟೆ ಕಲಾಪ ನಡೆದಿದೆ. ಧನ ವಿನಿಯೋಗ, ಭೂಸುಧಾರಣೆ, ಎಪಿಎಂಸಿ ತಿದ್ದುಪಡಿ ಸೇರಿ 36 ವಿಧೇಯಕಗಳು ಅಂಗೀಕಾರವಾಗಿವೆ. ರಾಜ್ಯ ವಿವಿಗಳು ಮತ್ತು ಕೆಲವು ಇತರ ಕಾನೂನುಗಳ ಬಿಲ್ ಬಗ್ಗೆ ಚರ್ಚಿಸಿದ ಬಳಿಕ ತಡೆ ಹಿಡಿಯಲಾಗಿದೆ ಎಂದು ಹೇಳಿದರು.

ಅನುಮೋದನೆಗೆ ಮುನ್ನ ಮಸೂದೆಗಳ ಮೇಲೆ 14 ಗಂಟೆ 22 ನಿಮಿಷ ಚರ್ಚೆಯಾಗಿದೆ. ಸಮಿತಿಗಳ 6 ವರದಿಗಳು, ಜಂಟಿ ಪರಿಶೀಲನಾ ಸಮಿತಿಯ ವಿಶೇಷ ವರದಿ, 57 ಅಧಿಸೂಚನೆಗಳು, 19 ಅಧ್ಯಾದೇಶಗಳು, 62 ವಾರ್ಷಿಕ ವರದಿಗಳು, 69 ಲೆಕ್ಕ ಪರಿಶೋಧನಾ ವರದಿ, ತಲಾ 1 ಅನುಷ್ಠಾನ, ಅನುಪಾಲನಾ ವರದಿ ಹಾಗೂ 3 ವಿಶೇಷ ವರದಿ ಮಂಡನೆಯಾಗಿವೆ ಎಂದು ತಿಳಿಸಿದರು.

**1,109ಕ್ಕೆ ಉತ್ತರ:** ಸದನದಲ್ಲಿ ಸ್ವೀಕರಿಸಿದ್ದ 3,071 ಪ್ರಶ್ನೆಗಳ ಪೈಕಿ 1,109 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ವಿವರ ನೀಡಿದರು.